# ಪಾತ್ರದಲ್ಲಿ ಒಂದಾದರೆ ನಟನೆ ಸಾಧ್ಯ!



**ಭೂಮಿಕಾ ಶೆಟ್ಟಿ**

ಕಲರ್ಸ್ ಕನ್ನಡದ 'ಕಿನ್ನರಿ'ಯ ಮಣಿ

★ *ಮಧ್ಯಂತರ ರಂಗ ಪ್ರವೇಶ ಹೇಗೆನಿಸಿತು?*

ಮಣಿ ಚಿಕ್ಕ ಹುಡುಗಿ ದೊಡ್ಡವಳಾಗಿದ್ದಾಳೆ. ಆಕೆಯೆ ಕಥೆಯ ಆತ್ಮ. ಅಂತಹ ಪ್ರಧಾನ ಪಾತ್ರ ನಿರ್ವಹಣೆ ಖುಷಿ ಕೊಟ್ಟಿದೆ. ಮೊದಲ ಅವಕಾಶದಲ್ಲಿಯೇ ಇಂತಹ ಪಾತ್ರ ನನ್ನ ಪಾಲಿಗೆ ಬಂದಿದೆ ಎನ್ನುವ ಹೆಮ್ಮೆಯೂ ಇದೆ. ಆದರೆ ಇದು ತುಂಬಾ ಸವಾಲಿನ ಕೆಲಸ ಕೂಡ ಹೌದು. ಏಕೆಂದರೆ, ಈಗಾಗಲೇ ಬಾಲ ಮಣಿ ಜನರ ಮನಸ್ಸಿನಲ್ಲಿ ಮನೆ ಮಾಡಿದ್ದಾಳೆ. ಅವಳನ್ನು ಮೊದಲು ಒಳಗೊಂಡು ನಾನು ಇಲ್ಲಿ ಕಾಣಿಸಿಕೊಳ್ಳಬೇಕು. ಆಕೆಯ ಭಾಷೆ, ನಾಟಕೀಯತೆ, ಅಭಿನಯ, ಭಾವ, ನಡವಳಿಕೆ ಎಲ್ಲಾ ಹಂತದಲ್ಲಿಯೂ ಜಾಗರೂಕತೆಯಿಂದ ಗಮನಿಸಬೇಕಾಗುತ್ತದೆ. ಪಾತ್ರವಾಗಿ ಬಾಲ ಮಣಿಯನ್ನೂ ರೂಢಿಸಿಕೊಂಡು ನಾನು ಅಭಿನಯಿಸುವುದು ನಿಜಕ್ಕೂ ನಟನೆ.

★ *ಓದಿನ ನಡುವಿನ ಬಿಡುವು ನಟನೆಗಾ?*

ನನ್ನೂರು ಕುಂದಾಪುರ. ಬಾಲ್ಯದಿಂದಲೂ ಭರತನಾಟ್ಯ, ಯಕ್ಷಗಾನ ಅಭ್ಯಾಸ ಮಾಡುತ್ತಾ ಬೆಳೆದಿದ್ದೇನೆ. ಎಂಜಿನಿಯರಿಂಗ್ ಓದಲು ಬೆಂಗಳೂರಿಗೆ ಬಂದೆ. ನನ್ನ ಸ್ನೇಹಿತರು ನನ್ನ ಕಲೆಯನ್ನು ಪ್ರೋತ್ಸಾಹಿಸಿ ಮಾಡೆಲಿಂಗ್, ಅಭಿನಯದಲ್ಲಿ ತೊಡಗಲು ಒತ್ತಾಯಿಸಿದರು. ಅದಕ್ಕೆ ಆಡಿಷನ್ ಕೊಡ್ತಾ ಇದ್ದೆ. ಈ ಮೊದಲು 'ಜೀವನ ಚೈತ್ರ'ದಲ್ಲಿ ಪುಟ್ಟ ಅತಿಥಿ ಪಾತ್ರ ಮಾಡಿದೆ. ಇದು ನನ್ನ ಮೊದಲ ಅವಕಾಶ. ಬಿಇ ಎರಡನೇ ಸೆಮ್‌ನಲ್ಲಿದ್ದೇನೆ. ಓದು ಮತ್ತು ಹವ್ಯಾಸ ಎರಡನ್ನೂ ನಿರ್ವಹಿಸಲೇಬೇಕು. ಅಪ್ಪ ಭಾಸ್ಕರ ಶೆಟ್ಟಿ, ಉದ್ಯಮಿ. ಅವರಿಗೆ ಓದು ಮೊದಲ ಪ್ರಾಶಸ್ತ್ಯ. ಅಮ್ಮ ಬೇಬಿ ಗೃಹಿಣಿ. ಆಕೆ ನನ್ನ ಬಯಕೆಯನ್ನೇ ಬೆಂಬಲಿಸುತ್ತಾಳೆ. ಸದ್ಯ ಹೊಸ ಪಾತ್ರ ಆಗಿದ್ದರಿಂದ ಸ್ವಲ್ಪ ಹೆಚ್ಚಿನ ಕೆಲಸ ಇದೆ. 'ಕಿನ್ನರಿ' ತಂಡವೂ ಓದಿಗೆ ಅನುಕೂಲ ಮಾಡಿಕೊಡುತ್ತದೆ. ಕಾಲೇಜಿನಲ್ಲಿಯೂ ನಟನೆಗೆ ಸಹಾಯ ಮಾಡುತ್ತಾರೆ. ಇದೆಲ್ಲವನ್ನೂ ಸಮತೋಲನ ಮಾಡುತ್ತೇನೆ.

★ *ಮುಂದಿನ ಹೆಜ್ಜೆಗಳ ಬಗ್ಗೆ ಯಾವ ಲೆಕ್ಕಾಚಾರ ಹಾಕಿದ್ದೀರಿ?*

ಏನು ಎಂದು ಸ್ಪಷ್ಟವಾಗಿ ನಿರ್ಧರಿಸಿಲ್ಲ. ಇದನ್ನೇ ಮಾಡಬೇಕು ಎನ್ನುವುದೂ ನಿರ್ದಿಷ್ಟವಾಗಿಲ್ಲ. ಆದರೆ ಮೊದಲು ಓದು ಎನ್ನುವುದು ಮಾತ್ರ ಖಚಿತವಾಗಿದೆ. ಇದಾದ ಮೇಲೆ ಏನನ್ನಾದರೂ ಮಾಡಲು ಸಾಕಷ್ಟು ಸಮಯ ಇದೆ. ಯಾವುದಕ್ಕೂ 'ಕಿನ್ನರಿ'ಯ ಯಶಸ್ಸು ನನ್ನ ಮುಂದಿನ ಹೆಜ್ಜೆಗಳಿಗೂ ಕಾರಣವಾಗುತ್ತದೆ. ಈಗ ಅದನ್ನು ಮಾತ್ರ ಯೋಚಿಸುತ್ತೇನೆ. ಮುಂದೆ ನಾನೇ ನಿರ್ದೇಶನ ಮಾಡಬೇಕು ಎನ್ನುವ ಕನಸೂ ಇದೆ. ಯಾವುದಕ್ಕೂ ಈಗ ಕೈಗೊಂಡಿರುವ ಕೆಲಸಗಳು ಮುಗಿಯಬೇಕು.

★ *ನಟನೆಯ ಮೊದಲ ದಿನ ಹೇಗಿತ್ತು? ನಟನೆ ಬಗ್ಗೆ ಏನು ಹೇಳುತ್ತೀರಿ?*

ಅಂದು ನಾನೊಬ್ಬಳೇ ಹೊಸಬಳು ಎನ್ನುವುದು ಎದ್ದು ಕಾಣುತ್ತಿತ್ತು. ಹಳೆಯ ಧಾರಾವಾಹಿಗೆ ಹೊಸ ಪ್ರವೇಶ. ಕ್ರಮೇಣ ಎಲ್ಲರಲ್ಲಿ ನಾನೂ ಒಬ್ಬಳಾದೆ. ನನಗೆ ಅನ್ನಿಸುವಂತೆ ಮೊದಲು ಪಾತ್ರಕ್ಕೆ ನ್ಯಾಯ ಕೊಡಬೇಕು ಅಂದರೆ ಬದ್ಧತೆ ಇರಬೇಕು. ಅದಾದ ಮೇಲೆ ಸಣ್ಣ ಹೋಮ್ ವರ್ಕ್ ಮಾಡಿಕೊಂಡಿರಬೇಕು. ಇದು ಪಾತ್ರವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಮೊದಲು ಪಾತ್ರವನ್ನು ಪ್ರವೇಶಿಸಿದರೆ ಅಭಿನಯ ಸುಲಭ ಆಗುತ್ತದೆ. ಶೂಟಿಂಗ್ ಮನೆಗೆ ಹೋದ ತಕ್ಷಣ ಪಾತ್ರವಾಗಿ ಬದಲಾಗಬೇಕು. ಸೆಟ್‌ನಲ್ಲಿಯೂ ಮಾತು, ನೋಟ ಎಲ್ಲಾ ಪಾತ್ರವಾಗಬೇಕು. ನಾನೂ ಪಾತ್ರದಲ್ಲಿಯೇ ಒಬ್ಬಳಾದರೆ ನಿರೀಕ್ಷಿತ ಗುರಿ ಮುಟ್ಟಲು ಸಾಧ್ಯವಾಗುತ್ತದೆ.

■ ರಾಗು